ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 5434
ಸದಸ್ಯರ ಹೆಸರು : ಶ್ರೀ ಯೋಗೀಶ್ ಭಟ್ ಎನ್. (ಮಂಗಳೂರು)
ಉತ್ತರಿಸುವ ದಿನಾಂಕ : 19.07.2005
ಉತ್ತರಿಸುವ ಸಚಿವರು : ಮುಖ್ಯಮಂತ್ರಿಗಳು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ.	10 ವರ್ಷ ಪೂರ್ತಿಗೊಳಿಸಿದ ಸೇವಾನಿರತ ಪದವೀಧರ ಪೊಲೀಸ್ ಸಿಬ್ಬಂದಿಗಳಿಗೆ ವಿಶೇಷ ನೇಮಕಾತಿಯ ಆಧಾರದಲ್ಲಿ ಸಿವಿಲ್ ಪೊಲೀಸ್ ಉಪನಿರೀಕ್ಷಕರ ಹುದ್ದೆಗೆ ನೇಮಕ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ;	2000ನೇ ಸಾಲಿನಲ್ಲಿ 150 ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಹುದ್ದೆಗಳಿಗೆ ಮತ್ತು 2003ನೇ ಸಾಲಿನಲ್ಲಿ 200 ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಹುದ್ದೆಗಳಿಗೆ 10 ವರ್ಷ ಸೇವೆ ಸಲ್ಲಿಸಿರುವ ಸೇವಾ ನಿರತ ಅಭ್ಯರ್ಥಿಗಳಿಂದ (ವಿಶೇಷ) ನಿಯಮಗಳಡಿಯಲ್ಲಿ ನೇಮಕಾತಿ ಮಾಡ ಲಾಗಿದೆ. ಪ್ರಸ್ತುತ ಸಬ್ ಇನ್ಸ್‌ಪೆಕ್ಟರ್‌ಗಳ ನೇರ ನೇಮಕಾತಿಗೆ ಮಿತವ್ಯಯ ಆದೇಶವನ್ನು ಸಡಿಲಿಸಿದ್ದು, ನೇರ ನೇಮಕಾತಿಯಿಂದ ಸಮರ್ಥ ಅಭ್ಯರ್ಥಿಗಳ ಸೇವೆಯನ್ನು ಪೊಲೀಸ್ ಇಲಾಖೆ ಪಡೆದುಕೊಳ್ಳಬಹು ದಾಗಿದೆ. ಈ ನೇರ ನೇಮಕಾತಿಯಲ್ಲಿ ಸೇವಾ ನಿರತ ಅಭ್ಯರ್ಥಿಗಳಿಂದ ಶೇಕಡಾ 10 ಮೀಸ ಲಾತಿ ಇರುತ್ತದೆ. ಆದುದರಿಂದ ಸದ್ಯದಲ್ಲಿ 10 ವರ್ಷ ಸೇವೆ ಸಲ್ಲಿಸಿದ ಸೇವಾ ನಿರತ ಅರ್ಹ ಅಭ್ಯರ್ಥಿಗಳನ್ನು ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಹುದ್ದೆಗೆ ನೇಮಕಾತಿ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.
ಆ.	ರಾಜ್ಯದಲ್ಲಿ ಅರ್ಹ ಪೊಲೀಸ್ ಸಿಬ್ಬಂದಿಗಳ ಸಂಖ್ಯೆ ಎಷ್ಟು?	ಅರ್ಹ ಸೇವಾ ನಿರತ ಪದವೀಧರ ಪೊಲೀಸ್ ಸಿಬ್ಬಂದಿಗಳ ಒಟ್ಟು ಸಂಖ್ಯೆ: 1797. ಇದರಲ್ಲಿ ಸಿಪಿಸಿ–1513, ಹೆಚ್‌ಸಿ–270, ಎ.ಎಸ್.ಐ,–14.

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
೫.	ಮಂಗಳೂರಿನಲ್ಲಿನ ಪೊಲೀಸ್ ವಸತಿ ಗೃಹ ನಿರ್ಮಾಣಕ್ಕೆ ಸರ್ಕಾರ ತುರ್ತು ಕ್ರಮಕೈಗೊಳ್ಳುವುದೇ ಹಾಗು ದುಸ್ಥಿತಿಯಲ್ಲಿರುವ ಹಳೆಯ ಕಟ್ಟಡ ದುರಸ್ತಿಗೆ ಯಾವ ಕ್ರಮಕೈಗೊಳ್ಳಲಾಗುವುದು?	ಮಂಗಳೂರು ನಗರದಲ್ಲಿ 14 ಪಿಸಿ/ಹೆಚ್‌ಸಿ ಮತ್ತು 4 ಪಿಎಸ್‌ಐ ವಸತಿ ಗೃಹಗಳನ್ನು ತ್ವರಿತ ವಸತಿ ಯೋಜನೆ 2ರಡಿಯಲ್ಲಿ ಅನುಮೋದನೆ ಗೊಂದು ಪ್ರಸ್ತುತ ಕರ್ನಾಟಕ ರಾಜ್ಯ ಪೊಲೀಸ್ ಗೃಹ ನಿರ್ಮಾಣ ನಿಗಮ ನಿಯಮಿತದವರು ಮಾರ್ಚಿ–2005ರಿಂದ ಕಾಮ ಗಾರಿಯನ್ನು ಪ್ರಾರಂಭಿಸಿರುತ್ತಾರೆ. ದುಸ್ಥಿತಿಯಲ್ಲಿರುವ ಪೊಲೀಸ್ ವಸತಿ ಗೃಹಗಳ ದುರಸ್ಥಿಗೆ ಪ್ರತಿ ವರ್ಷವು ಅನುದಾನ ಬಿಡುಗಡೆಯಾಗುತ್ತಿದೆ. 2004–05ನೇ ಸಾಲಿನಲ್ಲಿ ರೂ.3.93 ಲಕ್ಷಗಳು ಬಿಡುಗಡೆಯಾಗಿದ್ದು, ಇದರಲ್ಲಿ 2.93 ಲಕ್ಷಗಳ ಅನುದಾನವನ್ನು ಮಂಗಳೂರು ನಗರದಲ್ಲಿ ವಸತಿ ಗೃಹಗಳ ದುರಸ್ತಿಗಾಗಿ ಉಪಯೋಗಿಸಲಾಗುತ್ತಿದೆ.

ಶ್ರೀ ಎನ್.ಯೋಗೀಶ್ ಭಟ್: ಎಂ.ಎ., ಎಂಎಸ್‌ಸಿ ಆಗಿರುವ ಅನೇಕ ಪದವೀಧರರು ಪೊಲೀಸ್ ಕಾನ್ಸಟೇಬಲ್ ಹಾಗು ಹೆಡ್‌ಕಾನ್ಸ್‌ಟೇಬಲ್ ಹುದ್ದೆಯಲ್ಲಿ 10 ವರ್ಷಗಳಿಗೂ ಮೇಲ್ಪಟ್ಟು ಸೇವೆ ಸಲ್ಲಿಸಿದವರಿಗೆ ಕನಿಷ್ಟ ತಾವು ಮಾನವೀಯ ನೆಲೆಯಲ್ಲಿ, ನೇರ ನೇಮಕಾತಿಯ ಸಂದರ್ಭದಲ್ಲಿ ಪ್ರತಿಶತ 50ರಷ್ಟಾದರೂ ಕಾಯ್ದಿರಿಸಲು ಕ್ರಮ ತೆಗೆದುಕೊಳ್ಳಬೇಕೆಂದು ಅವರೆಲ್ಲರ ಪರವಾಗಿ ನಾನು ಮಾಡಿಕೊಳ್ಳುತ್ತಿದ್ದೇನೆ. ಇದಕ್ಕೆ ಮಾನವೀಯ ನೆಲೆಯಲ್ಲಿ ತಾವು ಸ್ಪಂದಿಸಬೇಕೆಂದು ವಿನಂತಿಸುತ್ತೇನೆ. ಇದರಿಂದ ಒಂದು ಲಾಭವಿದೆ. ಬೇರೆಯವರಿಗೆ 1 ವರ್ಷ ಪ್ರೊಬೇಷನರಿ ಅವಧಿ ಇರುತ್ತದೆ. ಆದರೆ ಇವರಿಗೆ 6 ತಿಂಗಳು ಪ್ರೊಬೇಷನರಿ, ಇನ್ನುಳಿದ 6 ತಿಂಗಳು ತರಬೇತಿಯಲ್ಲಿ ಒಳ್ಳೆಯ ಅನುಭವಸ್ಥರನ್ನು ಕಾರ್ಯಕ್ಷೇತ್ರಕ್ಕೆ ಕಳುಹಿಸಲಿಕ್ಕೆ ಸಾಧ್ಯವಿದೆ. ಈ ಹಿನ್ನೆಲೆಯಲ್ಲಿ ಇದಕ್ಕೆ ತಾವು ಸ್ಪಂದಿಸಬೇಕೆಂದು ತಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಈ ವಿಚಾರದ ಬಗ್ಗೆ ಬಹಳ ವರ್ಷಗಳಿಂದ ಬೇಡಿಕೆಯಿದೆ. ಡಬಲ್ ಡಿಗ್ರಿ ಮಾಡಿಕೊಂಡಿರುವ ಅನೇಕ ಜನ ಪದವೀಧರರು

ಕಾನ್ಸ್‌ಟೇಬಲ್ ಕೆಲಸವನ್ನು ಮಾಡುತ್ತಿದ್ದಾರೆ. ನೇರ ನೇಮಕಾತಿ ಮಾಡುವಾಗ ಅವರಿಗೆ ಶೇಕಡ 50ರಷ್ಟು ಆದ್ಯತೆಯನ್ನು ಕೊಟ್ಟರೆ ಒಂದೆರಡು ಮೂರು ಹಂತದಲ್ಲಿ ಅವರು ಪೂರ್ಣ ಮಾಡಬಹುದು, ಅವರು ಜೀವನ ಪೂರ್ತಿಯಾಗಿ ಅವರು ಕಾನ್ಸಟೇಬಲ್ ಆಗಿ ಇರುವುದಕ್ಕೆ ಏನು ಅಪರಾಧ ಮಾಡಿದ್ದಾರೆ. ಜೀವನ ಪೂರ್ತಿ ಪೇದೆಯಾಗಿ ಜೀವನ ನಡೆಸುವ ಪರಿಸ್ಥಿತಿಯಿದೆ. ಅವರು ಕ್ವಾಲಿಫೈಡ್ ಆಗಿದ್ದಾರೆ, ಸರ್ವೀಸ್ ಸಹ ಆಗಿದೆ. ಹಾಗಾಗಿ ದಯಮಾಡಿ ಅವರಿಗೆ ನೇರ ನೇಮಕಾತಿಯಲ್ಲಿ ಒಂದು ಅವಕಾಶವನ್ನು ಮಾಡಿಕೊಡುವ ಒಂದು ತೀರ್ಮಾನವನ್ನು ತಾವು ಮಾಡಿ ಅವರಿಗೆ ಒಂದು ಅವಕಾಶವನ್ನು ಸಹ ಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಎನ್.ಧರ್ಮಸಿಂಗ್:– (ಮಾನ್ಯ ಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೆ, ಈಗಾಗಲೇ ಹೆಡ್ ಕಾನ್ಸ್‌ಟೇಬಲ್ ಇನ್ ಸರ್ವೀಸ್ ಇದ್ದ ಮಂದಿಗೆ 10 ಪರ್ಸೆಂಟ್ ರಿಜರ್ವೇಷನ್ ಇಟ್ಟಿದ್ದೇವೆ. ಅದರಲ್ಲಿ ನಾವು ಕೊಡುತ್ತಿದ್ದೇವೆ. ಮತ್ತೆ ಈಗ 11ನೇ ಆಗಸ್ಟ್‌ಗೆ 150 ಪಿಎಸ್‌ಐ ಪೊಲೀಸ್ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ. ಏಪ್ರಿಲ್ 2003ರಲ್ಲೂ ಕೂಡ 200 ಪೊಲೀಸ್ ನೇಮಕ ಮಾಡಿದೆ. ಈ ರೀತಿಯಾಗಿ 350 ಮಂದಿ ಇನ್ ಸರ್ವೀಸ್ ಮಂದಿಗೆ ನಾವು ಸಬ್‌ಇನ್ಸ್‌ಪೆಕ್ಟರ್ ಹುದ್ದೆಗೆ ಭರ್ತಿ ಮಾಡಿದ್ದೇವೆ. ಅವರಿಗೂ ಅವಕಾಶ ಕಲ್ಪಿಸಿಕೊಟ್ಟಿದ್ದೇವೆ. ಇದನ್ನು ಮತ್ತೆ ಹೆಚ್ಚು ಮಾಡತಕ್ಕಂಥದ್ದು ಇದೆ, ಇದನ್ನು ಗಮನದಲ್ಲಿಡುತ್ತೇವೆ. ಆದರೂ ಪ್ರಸ್ತುತ ಇವತ್ತಿನದಿವಸ 350 ಸಬ್‌ಇನ್ಸ್‌ಪೆಕ್ಟರ್‌ಗೆ ಭರ್ತಿ ಮಾಡತಕ್ಕಂತದ್ದು ಈಗಾಗಲೇ ಮಾಡಿದ್ದೇವೆ. ಮುಂದೆ ತಮ್ಮ ಏನು ಒಂದು ಭಾವನೆ ಇದೆ ಹೆಚ್ಚಿ ಬಿಎ ಆಗಿದ್ದಾರೆ, ಎಂ.ಎ ಆಗಿದ್ದಾರೆ. ಸಾಕಷ್ಟು ಶಿಕ್ಷಣ ಹೊಂದಿದ್ದಾರೆ ಇನ್‌ಸರ್ವೀಸ್‌ನಲ್ಲಿ ಅವರಿಗೆ 10 ಪರ್ಸೆಂಟ್ ಏನು ಕೊಟ್ಟಿದ್ದೇನೆ. ಅದರ ಮುಖಾಂತರ ಮುಂದೆ ಡ್ರೈವ್ ಇನ್ನೂ 1700 ಹುದ್ದೆಗಳು ಇವೆ. ಅದು ಬರತಕ್ಕಂತ ಕಾಲದಲ್ಲಿ ಅವರಿಗೆ ಹೆಚ್ಚಿನ ಅವಕಾಶ ಕಲ್ಪಿಸಿಕೊಡುತ್ತೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೆ, ಈಗ ಏನು ತಾವು 10 ಪರ್ಸೆಂಟ್ ಆಧಾರದ ಮೇಲೆ ಕೊಟ್ಟಿದ್ದೀರಿ. ಅದೇ ರೀತಿ ಕೊಟ್ಟರೆ ಇನ್ನು 10 ವರ್ಷವಾದರೂ ಅವರಿಗೆ ಪ್ರಮೋಶನ್ ಸಿಗುವುದಿಲ್ಲ. ಅದಕ್ಕಾಗಿ ಅದನ್ನು 25 ಪರ್ಸೆಂಟ್ ಮಾಡಿ, 50 ಪರ್ಸೆಂಟ್ ಅಂದರೆ ಅದು ಬಹಳ ಜಾಸ್ತಿಯಾಗಬಹುದು.

ಶ್ರೀ ಎನ್.ಧರ್ಮಸಿಂಗ್:– ಮಾನ್ಯ ಅಧ್ಯಕ್ಷರೆ, 10 ಪರ್ಸೆಂಟ್ ನಾವು ಇಲ್ಲಿಯವರೆಗೂ ಮಾಡಿದ್ದು, ತಾವು ಏನು 25 ಪರ್ಸೆಂಟ್ 15 ಪರ್ಸೆಂಟ್ ಆಗಲಿ ಅದರ ಬಗ್ಗೆ ನಾನು ವಿಚಾರ ಮಾಡಿ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಮಾನ್ಯ ಅಧ್ಯಕ್ಷರೇ ಈಗ ಬೆಂಗಳೂರು ನಗರದಲ್ಲಿ

ಸಾಫ್ಟ್‌ವೇರ್ ಇಂಜಿನಿಯರ್‌ಗಳು ಕೆಲಸ ಮಾಡಿಕೊಂಡು ರಾತ್ರಿ ವೇಳೆ ಮನೆಗೆ ಬರುವುದಕ್ಕೆ ಆಗುತ್ತಿಲ್ಲ ಪೇದೆಗಳು ಇಲ್ಲ, ಎಲ್ಲಿ ಪೊಲೀಸ್‌ನವರನ್ನು ಕೇಳಿದರೂ ಕೂಡ ಪೇದೆಗಳ ನೇಮಕಾತಿ ಆಗಲಿಲ್ಲ. ನಾವು ರಕ್ಷಣೆ ಕೊಡುವುದಕ್ಕೆ ಆಗುತ್ತಿಲ್ಲ ಎನ್ನುವ ಮಾತನ್ನು ಎಲ್ಲಾ ಸ್ಟೇಷನ್‌ನಲ್ಲೂ ಕೂಡ ಹೇಳುತ್ತಿದ್ದಾರೆ. ಒಂದಾದರೆ ಈಗ ಯೋಗೀಶ್ ಭಟ್‌ರವರು ಏನು ಹೇಳಿದ್ದಾರೆ. ಅನೇಕ ಜನ ಅರ್ಜಿಗಳನ್ನು ಕೊಟ್ಟಿದ್ದಾರೆ ನಾವು ಇಷ್ಟೊಂದು ಫಸ್ಟ್ ರ್‍ಯಾಂಕ್‌ನಲ್ಲಿ ಪಾಸಾಗಿದ್ದೇವೆ. 85 ಪರ್ಸೆಂಟ್ ಮಾರ್ಕ್ಸ್ ತೆಗೆದುಕೊಂಡಿದ್ದೇವೆ. ಆದರೂ ಕೂಡ ನಮಗೆ ಮಾನ್ಯತೆ ಸಿಗುತ್ತಿಲ್ಲ ಎನ್ನುವ ಮಾತನ್ನು ಅನೇಕ ಜನ ಅವರ ಅಹವಾಲುಗಳನ್ನು ಹೇಳಿಕೊಂಡಿದ್ದಾರೆ. ಆದ್ದರಿಂದ ನಮ್ಮ ಮನವಿ ಏನು ಅಂದರೆ ಒಂದು ಪೊಲೀಸ್ ಕಾನ್ಸ್‌ಟೇಬಲ್ಲನ್ನು ಬೆಂಗಳೂರು ಮಹಾನಗರಕ್ಕೆ ತುರ್ತಾಗಿ ನೇಮಕ ಮಾಡಿಕೊಂಡು ಹೆಚ್ಚು ರಕ್ಷಣೆ ಕೊಡುವ ದಿಸೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಗಮನಹರಿಸಬೇಕು ಮತ್ತು ಈ ಒಂದು ನೇರ ನೇಮಕಾತಿ ಮಾಡುವಂತಹ ಸಂದರ್ಭದಲ್ಲಿ ಹೆಚ್ಚಿನ ಆದ್ಯತೆಯನ್ನು ಏನು ಯೋಗೀಶ್ ಭಟ್ಟರು ಮತ್ತು ನಮ್ಮ ನಾಯಕರು ಹೇಳಿದ್ದಾರೆ. ಆ ರೀತಿಯಲ್ಲಿ 50 ಪರ್ಸೆಂಟ್ ಏನಾದರೂ ಕೊಟ್ಟರೆ ನಿಜವಾಗಿಯೂ ಕೂಡ ಅವರಿಗೆ ನ್ಯಾಯ ಸಿಗುತ್ತದೆ ಎನ್ನುವ ಮಾತನ್ನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎನ್.ಧರ್ಮಸಿಂಗ್:– ಮಾನ್ಯ ಅಧ್ಯಕ್ಷರೆ ನೇಮಕಾತಿಯಲ್ಲಿ...

ಶ್ರೀ ವೈಜನಾಥ ಪಾಟೀಲ್:– ಮಾನ್ಯ ಅಧ್ಯಕ್ಷರೆ, ನೇಮಕಾತಿ ಎಲ್ಲಾ ಭಾಗದವರಿಗೆ ಆಗುವ ಹಾಗೆ ಒಂದು ವ್ಯವಸ್ಥೆಯಾಗಬೇಕು. ಕೆಲವೇ ಭಾಗದವರಿಗೆ ನೇಮಕಾತಿ ಆಗುತ್ತಿದೆ. ಹೋದ 4–5 ವರ್ಷಗಳ ರೆಕಾರ್ಡ್ ತಾವು ನೋಡಿದರೆ ಅಲ್ಲಿ ನಮ್ಮ ಗುಲ್ಬರ್ಗಕ್ಕೆ ಅಂತೂ ಒಬ್ಬರಿಗೆ ಇಬ್ಬರಿಗೂ ನೇಮಕವಾಗುವುದಿಲ್ಲ. ಪೊಲೀಸ್ ಇನ್ಸ್‌ಪೆಕ್ಟರ್ ಇಂಟರ್‌ವ್ಯೂನಲ್ಲಿ. ಅಂತಹ ಒಂದು ವ್ಯವಸ್ಥೆಯನ್ನು ಮಾಡಿ ಆ 371 ಎಂದು ತರುತ್ತೀರೋ ಗೊತ್ತಿಲ್ಲ, ನಮ್ಮ ಮಾನ್ಯ ಶಿವರಾಜ್ ಪಾಟೀಲರು ಏನು ಮಾಡುತ್ತಾರೋ ಗೊತ್ತಿಲ್ಲ. ಯಾವುದಾದರೂ ಒಂದು ಹೊಸ ವ್ಯವಸ್ಥೆಯನ್ನು ಹುಡುಕಿ ತಾವು ಆ ಭಾಗದವರು.

ಶ್ರೀ ಎನ್.ಯೋಗೀಶ್ ಭಟ್:–ಮಾನ್ಯ ಅಧ್ಯಕ್ಷರೆ ಖಂಡಿತವಾಗಿಯೂ ಮಾನ್ಯ ಮುಖ್ಯಮಂತ್ರಿಗಳು ಸ್ಪಂದಿಸಬೇಕು. ತಾವು 50 ಪರ್ಸೆಂಟ್ ಮಾಡಲೇಬೇಕು ಎನ್ನುವ ಆಗ್ರಹವನ್ನು ನಾನು ಮಾಡುತ್ತಿದ್ದೇನೆ. ಅದರ ಜೊತೆಯಲ್ಲಿ ವಿಶೇಷವಾಗಿ ಪೊಲೀಸ್ ವಸತಿ ಗೃಹಕ್ಕೆ ಸಂಬಂಧಪಟ್ಟು ಹಿಂದೆ ಮಾನ್ಯ ಗೃಹಮಂತ್ರಿಗಳು ನಮ್ಮ ಕ್ಷೇತ್ರಕ್ಕೆ ಬಂದಂತಹ ಸಂದರ್ಭದಲ್ಲಿ ಒಂದು ವಿನಂತಿಯನ್ನು ಮಾಡಿದ್ದೆ. ಒಬ್ಬ ಕಾನ್ಸ್‌ಟೇಬಲ್‌ನ್ನು ಮಲಗಿಸಿದರೆ ಅವರು ಸರಿಯಾಗಿ ಮಲಗಲಿಕ್ಕೆ ಆಗದೇ ಕಾಲನ್ನು

ತೊಡೆಯ ಮೇಲೆ ಹಾಕಿಕೊಂಡು ಮಲಗಬೇಕು. ಅಂದರೆ ಅಷ್ಟು ಕೂಡ ಲೆಂತು ವಿಡ್ತ್ ಇಲ್ಲದಂತಹ ಮನೆಗಳನ್ನು ಕಟ್ಟುತ್ತಿದ್ದಾರೆ. ಕನಿಷ್ಠ ಮೂಲಭೂತ ವ್ಯವಸ್ಥೆ ಗಳನ್ನಾದರೂ ಕೊಡುವಂತಹ, ಸರಿಯಾದ ವ್ಯವಸ್ಥೆಯನ್ನು ಮಾಡಬೇಕು ಎಂದು ಹೇಳುವಂತ ಒಂದು ವಿನಂತಿ. ಎರಡನೆಯದು ಕ್ವಾರ್ಟರ್ಸ್‌ಗೆ ಸಂಬಂಧಪಟ್ಟಂತೆ ಮಂಗಳೂರಿನಲ್ಲಿ ಬಹಳವಾಗಿ ಇರುವಂತಾದ್ದು...

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ:– ಮಾನ್ಯ ಅಧ್ಯಕ್ಷರೆ, ನಾನು ಗೃಹ ಮಂತ್ರಿಯಾದ್ದಾಗ ಹೊಸ ಮನೆಗಳನ್ನು ಮಾಡಿಸಿಕೊಟ್ಟೆ ರಿಪೇರಿ ಅಂದ್ರಿ, ಆ ರಿಪೇರಿ ಮಾಡಿಸಿಕೊಟ್ಟ ಕಮ್ಯುನಿಟಿ ಹಾಲ್ ಹೇಳಿದಿರಿ, ಆ ಕಮ್ಯುನಿಟಿ ಹಾಲ್ ಮಾಡಿಸಿಕೊಟ್ಟೆ ಇಷ್ಟು ಮಾಡಿದರೂ ಕೂಡ ಮಲಗುವುದಕ್ಕೆ ಬರುವುದಿಲ್ಲ, ಮಲಗಿದರೆ ಏಳುವುದಕ್ಕೆ ಬರುವುದಿಲ್ಲ ಅಂತ ಹೇಳಿಕೊಂಡರೆ ನಮ್ಮ ಗತಿ ಏನಾಗುವುದು?

ಶ್ರೀ ಅರಗ ಜ್ಞಾನೇಂದ್ರ:– ಮಾನ್ಯ ಅಧ್ಯಕ್ಷರೆ, ಮಾನ್ಯ ಮಲ್ಲಿಕಾರ್ಜುನ ಎಂ ಖರ್ಗೆಯವರು ಗೃಹ ಸಚಿವರಾಗಿದ್ದಾಗ ಆಗಿದ್ದು ಹೌದು. ಪೊಲೀಸ್ ಸ್ಟೇಷನ್‌ಗಳು ಆಗುತ್ತಿದ್ದವು, ವಸತಿ ಗೃಹಗಳು ಆಗಿದ್ದು ಹೌದು.

ಶ್ರೀ ಪಿ.ಜಿ.ಆರ್.ಸಿಂಧ್ಯಾ:– ಮಾನ್ಯ ಅಧ್ಯಕ್ಷರೆ ನಾನು ಗೃಹ ಮಂತ್ರಿಯಾಗಿದ್ದಾಗಲೂ ಸಹ ಮಾನ್ಯ ಯೋಗಿಶ್‌ಭಟ್‌ರವರು ಎಲ್ಲಾ ವಸತಿ ಗೃಹಗಳನ್ನು ರಿಪೇರಿ ಮಾಡಿಸಿಕೊಂಡಿದ್ದಾರೆ. ಅವರು ಇಲ್ಲಾ ಅಂತ ಹೇಳಲಿ.

ಶ್ರೀ ಬಿ.ಎಸ್.ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೆ ಮಾನ್ಯ ಖರ್ಗೆಯವರು ಮಾಡಿದರು, ಸಿಂಧ್ಯಾರವರು ಮಾಡಿದರು, ಮಾನ್ಯ ಮುಖ್ಯಮಂತ್ರಿಗಳು ಈ ಕಡೆ ಗಮನಕೊಡಲಿಲ್ಲ ಅಂತ. ಮಾನ್ಯ ವಾಟಾಳ್ ನಾಗರಾಜ್‌ರವರು ಪೊಲೀಸ್‌ನವರ ವಿಷಯ ಬಂದಾಗಲೆಲ್ಲಾ ಎದ್ದು ನಿಂತು ಮಾತನಾಡುತ್ತಿದ್ದರು, ಈಗ ಪೊಲೀಸ್ ಇಲಾಖೆ ಬಗ್ಗೆ ಏನಾದರೂ ಸಿಟ್ಟು ಬಂದಿದೆಯೇ? ಇವತ್ತು ನೀವು ಬಹಳ ಮೌನವಾಗಿದ್ದೀರಿ ಏಕೆ?

ಶ್ರೀ ವಾಟಾಳ್ ನಾಗರಾಜ್:– ಯಾವತ್ತೂ ನೀವು ಬಿಡುವುದಿಲ್ಲ ಅದಕ್ಕೆ ನಾವು ಸುಮ್ಮನೆ ಕುಳಿತಿದ್ದೇನೆ. ನಿಮ್ಮ ದಾಳಿ ನಮ್ಮ ಕೈಯಲ್ಲಿ ತಡೆದುಕೊಳ್ಳುವುದಕ್ಕೆ ಆಗುತ್ತಿಲ್ಲ.

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ:– ಪೊಲೀಸ್‌ರವರ ಮೇಲೆ ಸಿಟ್ಟು ಯಾವಾಗ ಬರುತ್ತಿತ್ತು ಅಂದರೆ ಪೊಲೀಸ್‌ರವರು ಎಳೆದುಕೊಂಡು ಹೋಗಿ ಅಲ್ಲಿ ಪೊಲೀಸ್ ಸ್ಟೇಷನ್‌ನಲ್ಲಿ ಏನು ಕೂರಿಸುತ್ತಿದ್ದರು ಆಗ ಸಿಟ್ಟು ಬಂದು ಅವರ ಪರ ಬಂದು ಮಾತನಾಡುತ್ತಿದ್ದರು. ಈಗ ಎಲ್ಲಾ ಬೀಗರನ್ನು ನೆಂಟರನ್ನು ಕರೆದುಕೊಂಡು ಹೋದ ಹಾಗೆ ಕರೆದುಕೊಂಡು ಹೋಗಿ ಬಿಟ್ಟು ಬಿಡುತ್ತಾರೆ. ಫೋಟೋ ತೆಗೆಸಿ ಅದಕ್ಕೆ ಸಿಟ್ಟು ಬರುತ್ತಿಲ್ಲ.

ಶ್ರೀ ಅರಗ ಜ್ಞಾನೇಂದ್ರ:– ಮಾನ್ಯ ಉಪಾಧ್ಯಕ್ಷರೆ ನನ್ನ ವಿನಂತಿ ಇಷ್ಟೇ. ಏಕೆಂದರೆ

ಪೊಲೀಸ್ ಡಿಪಾರ್ಟ್‌ಮೆಂಟಿಗೆ ಒಂದು ಇಂಜಿನಿಯರಿಂಗ್ ವಿಭಾಗ ಇದೆ. ಅದನ್ನು ಸ್ವಲ್ಪ ಬದಲಾವಣೆ ಮಾಡಿ. ಏಕೆಂದರೆ, ಕ್ವಾಲಿಟಿ ಬಗ್ಗೆ ಏನೇನೂ ನೋಡುತ್ತಿಲ್ಲ. ನಿಮ್ಮ ಇಂಜಿನಿಯರಿಂಗ್ ವಿಭಾಗ. ಇವತ್ತು ತಾವು ಕಳೆದ ವರ್ಷ ಕಟ್ಟಿಸಿದಂತಹ ಕ್ವಾರ್ಟರ್ಸ್‌ಗಳು ಈಗ ಸೋರುತ್ತಿವೆ. ನಮ್ಮ ಊರಿನಲ್ಲಿ ಬಂದಂತಹ ಒಂದು ಸಣ್ಣ ಮಳೆಯಲ್ಲಿ. ಅವರಿಗೆ ಸೈಜ್ ಏನು ಕಟ್ಟಿಸಬೇಕು ಅಂತ ಗೊತ್ತಿಲ್ಲ. ಅವರು ಹೇಳಿದ ಹಾಗೆಯೇ ಪೊಲೀಸ್‌ನವರನ್ನು ಉದ್ದ ಜಾಸ್ತಿ ಇರುವವರನ್ನೇ ತಾವು ತೆಗೆದುಕೊಳ್ಳುತ್ತೀರಿ. ಸೈಜ್ ಎಷ್ಟು ಇರಬೇಕು ಅಂತ ಹೇಳಿ ಗೊತ್ತಿಲ್ಲ. ನಾವು ಅದಕ್ಕೆ ಹಣ ಹಾಕುತ್ತೇವೆ. ಆ ಸೈಜ್ ಬೆಳಕು ಮನೆ ಒಳಗಡೆ ಬರಬೇಕು ಎನ್ನುವಂತಹ ಕಲ್ಪನೆ ಇಲ್ಲದೇ ಕಟ್ಟಡ ಕಟ್ಟುತ್ತಿದ್ದಾರೆ.

ಶ್ರೀ ಎನ್ ಯೋಗೀಶ್ ಭಟ್ :– ಮಾನ್ಯ ಅಧ್ಯಕ್ಷರೇ, ಮಾನ್ಯ ಖರ್ಗೆಯವರು ಹಾಗೂ ಮಾನ್ಯ ಸಿಂಧ್ಯರವರು ಗೃಹ ಸಚಿವರಾಗಿದ್ದಾಗ ಸ್ಪಂದಿಸಿದ್ದು ಸತ್ಯ. ಆದರೆ ಮಾನ್ಯ ಧರ್ಮಸಿಂಗ್‌ರವರು ಗೃಹ ಮಂತ್ರಿಗಳಾದ ನಂತರ, ಮಂಗಳೂರು ಕ್ಷೇತ್ರಕ್ಕೆ ಯಾವ ಒಂದು ಕೊಡುಗೆಯು ಸಿಕ್ಕಿಲ್ಲ. ಈ ಹಿನ್ನೆಲೆಯಲ್ಲಿ ಅದನ್ನು ದುರಸ್ಥಿ ಮಾಡುವಂತಹ ದೃಷ್ಟಿಯಲ್ಲಿ. ಓವರ್‌ಹೆಡ್ ಟ್ಯಾಂಕ್ ಕಟ್ಟುವಂತಹ ವ್ಯವಸ್ಥೆಯಲ್ಲಿ ಹಾಗೂ ಕನಿಷ್ಠ ಒಂದು ನೂರು ವಸತಿ ಗೃಹಗಳನ್ನಾದರೂ ಕೊಡಬೇಕು ಎಂದು ನಾನು ಮಾನ್ಯ ಗೃಹಸಚಿವರನ್ನು ಹಾಗೂ ಮಾನ್ಯ ಮುಖ್ಯಮಂತ್ರಿಗಳನ್ನು ವಿಶೇಷವಾಗಿ ವಿನಂತಿ ಮಾಡುತ್ತೇನೆ.

ಶ್ರೀ ಎನ್ ಧರ್ಮಸಿಂಗ್ :– ಮಾನ್ಯ ಅಧ್ಯಕ್ಷರೇ, ಇನ್‌ಸರ್ವೀಸ್ ಇದರಲ್ಲಿ 10 ಪರ್ಸೆಂಟ್ ಮಾಡಿದ್ದೇವೆ. 50 ಮಾಡಬೇಕು, ಹೆಚ್ಚು ಮಾಡಬೇಕು ಎನ್ನುವಂತಹ ಅವರ ಆಗ್ರಹ ಏನಿದೆ ಅದನ್ನು ನೋಡುತ್ತೇನೆ ನಿಯಮದ ಪ್ರಕಾರ, ಆದರೂ ಕೂಡ 350 ಜನರಿಗೆ ಹೆಡ್‌ಕಾನ್ಸ್‌ಟೇಬಲ್, ಎ.ಎಸ್.ಐ ಆಗುವಂತಾದ್ದು ಮಾಡಿದ್ದೇವೆ. ಉಳಿದ ವಿಚಾರಗಳ ಬಗ್ಗೆ ಸರ್ಕಾರದ ನಿಯಮದ ಪ್ರಕಾರ ಏನು ಮಾಡಬೇಕೋ ಅದನ್ನು ನೋಡುತ್ತೇನೆ. ಇವತ್ತು ಮನೆಗಳು ಕಟ್ಟಿಸತಕ್ಕಂಥ ವಿಚಾರದಲ್ಲಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಗೃಹ ಮಂತ್ರಿಯಾದಾಗ ಏನು ಇತ್ತು ಅದನ್ನೇ ಮಾಡುತ್ತಿದ್ದೇವೆ. ಈ ಒಂದು ವಸತಿ ವಿಷಯದಲ್ಲಿ ವಿಶೇಷವಾಗಿ ಒಟ್ಟಾರೆ ಕರ್ನಾಟಕ ರಾಜ್ಯದಲ್ಲಿ 48 ರಿಂದ 50 ಪರ್ಸೆಂಟ್ ಅವರ ಬೇಡಿಕೆ ಏನಿತ್ತು ಅದನ್ನು ಮುಗಿಸಿದ್ದಾರೆ, ಮತ್ತು ನಿಮ್ಮಲ್ಲೂ ಕೂಡ ಏನು ಬೇಕಾಗಿತ್ತು. ಅದರಲ್ಲಿ 50 ಪರ್ಸೆಂಟ್ ಮಾಡಿ ಬೇರೆ ಕೂಡ ಬೇರೆ ಬೇರೆ ಹಂತದಲ್ಲಿದೆ ಅದನ್ನು ಮಾಡುತ್ತಿದ್ದೇವೆ. ಒಟ್ಟಾರೆ ಇವತ್ತು ನಬಾರ್ಡ್‌ನಿಂದ ಮತ್ತು ಬೇರೆ ಬೇರೆ ಸಂಸ್ಥೆಗಳಿಂದ ಹಣವನ್ನು ತೆಗೆದು ಕೊಂಡು ಹೋದ ಸಲ ಇದರ ಬಗ್ಗೆ ಹೆಚ್ಚಿನ ಗಮನವನ್ನು ಕೊಟ್ಟಿದ್ದಾರೆ. ಕೇಂದ್ರ ಸರ್ಕಾರದಿಂದ 518 ಕೋಟಿ ರೂಪಾಯಿಗಳನ್ನು ತೆಗೆದುಕೊಂಡಿದ್ದೇವೆ. ಮತ್ತು ಪ್ರಸ್ತಾವನೆ ಏನಿದೆ ಹೌಸಿಂಗ್ ಸ್ಕೀಮ್ ಮಾಡತಕ್ಕಂಥಾದ್ದು ಪ್ರತಿ ಜಿಲ್ಲೆಯಲ್ಲಿ ಎಸ್.ಪಿ

ಆಫೀಸ್‌ಗಳು ಆಗಲಿ, ಎಲ್ಲಾ ಕಡೆಗೆ ಸರಿಯಾದ ರೀತಿಯಲ್ಲಿ ಕೆಲಸ ನಡೆಯುತ್ತದೆ. ನಾವುಬಂದ ಮೇಲೆ ಏನು ಮಾಡಿದ್ದೀರಿ ಎಂದು ಕೇಳಿದರು. ನಾವು ಬಂದ ಮೇಲೆ ಕೂಡ ಆ ಕೆಲಸವನ್ನು ಮುಂದುವರಿಸಿಕೊಂಡು ಹೋಗಿದ್ದೇವೆ. ಹೆಚ್ಚಿನ ಹಣ ಕೊಡುತ್ತೇವೆ. ಕೆಲಸವನ್ನು ಮಾಡಿ ಕೊಡುತ್ತೇವೆ.

ಶ್ರೀ ಆರ್ ಅಶೋಕ್:– ಮಾನ್ಯ ಅಧ್ಯಕ್ಷರೇ, ವೀರಪ್ಪನ್‌ನನ್ನು ಹಿಡಿಯುವುದರಲ್ಲಿ ಆ ಎಸ್.ಟಿ.ಎಫ್ ನವರು ತಮ್ಮ ಸಾಹಸ ತೋರಿಸಿದ್ದಾರೆ. ಅವರಿಗೆ ಕೂಡುತ್ತೇನೆ, ಕೊಡುತ್ತೇನೆ ಅಂತ ಹೇಳಿ ಇನ್ನೂ ಹಣ ಬಿಡುಗಡೆ ಮಾಡಿಲ್ಲ. ದಯವಿಟ್ಟು ನನ್ನ ಕ್ಷೇತ್ರದಲ್ಲಿ ಸುಮಾರು 5 ಸಾವಿರ ಜನ ಇದ್ದಾರೆ. ಆ ಕಡೆ ಹೋದಾಗೆಲ್ಲ ನಮ್ಮನ್ನು ಬಿಡುವುದಿಲ್ಲ ದಯವಿಟ್ಟು ಅವರಿಗೆ ಏಕೆಂದರೆ ಆ ಸಾಹಸ ತೋರಿಸಿದ್ದಾರೆ. ತಮಿಳುನಾಡು ಸರ್ಕಾರ ಕೊಟ್ಟುಬಿಟ್ಟಿದೆ. ನಾವು ಕೊಟ್ಟಿಲ್ಲ ಅದಕ್ಕೋಸ್ಕರ ದಯವಿಟ್ಟು ತಾವು ಮನಸ್ಸು ಮಾಡಬೇಕು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 5054
ಸದಸ್ಯರ ಹೆಸರು : ಶ್ರೀ ಅಶೋಕ್, ಆರ್.
ಉತ್ತರಿಸುವ ದಿನಾಂಕ : 19.07.2005
ಉತ್ತರಿಸುವ ಸಚಿವರು : ಮುಖ್ಯಮಂತ್ರಿಗಳು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ.	ಬೆಂಗಳೂರು ನಗರ ಜಿಲ್ಲೆಯಲ್ಲಿ ನಗರಸಭೆ ವ್ಯಾಪ್ತಿಯ ಕುಡಿಯುವ ಕಾವೇರಿ ನೀರಿನ ವ್ಯವಸ್ಥೆಯನ್ನು ಕಲ್ಪಿಸಲು ತಡವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಸರ್ಕಾರದ ಗಮನಕ್ಕೆ ಬಂದಿದೆ
ಆ.	ಹಾಗಿದ್ದಲ್ಲಿ ಕಾವೇರಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಲು ತಡವಾಗಿರಲು ಕಾರಣಗಳೇನು ?	ಕರ್ನಾಟಕ ಸರ್ಕಾರವು ದಿನಾಂಕ : 26–12–2003 ರಂದು ಏಳು ನಗರಸಭೆ ಮತ್ತು ಒಂದು ಪುರಸಭೆ ಪ್ರದೇಶಗಳಿಗೆ ಕಾವೇರಿ ನೀರು ಮತ್ತು ಒಳಚರಂಡಿ ಸೌಲಭ್ಯ ಕಲ್ಪಿಸಲೋಸುಗ ರೂ. 658.64 ಕೋಟಿಗೆ